# ಹೆಣ್ಣು–ಗಂಡು ಸಮಾನ ಸ್ಪರ್ಧಿಗಳು

**ರಜಿನಿ**

**ಸ್ಟಾರ್ ಸುವರ್ಣದ ‘ನೀ ಇರಲು ಜೊತೆಯಲ್ಲಿ’ ಊರ್ಮಿಳಾ**

■ ರಾಘು

◆ **ಅಮೃತಾ ಮತ್ತು ಊರ್ಮಿಳಾ ಪಾತ್ರಗಳಿಗೆ ಹೋಲಿಸಿದರೆ, ನಿಮಗೆ ಏನೆನಿಸುತ್ತದೆ?**

ಯಾರಿಗೂ ಎದುರು ಮಾತನಾಡದಂತಹ ಸೌಮ್ಯ ಸ್ವಭಾವದ ಹುಡುಗಿ ಅಮೃತಾ. ತುಂಬ ಒಳ್ಳೆಯ ಹುಡುಗಿ, ಬಹುತೇಕ ವೀಕ್ಷಕರ ಮನೆಮಾತಾಗಿದ್ದಳು. ಅದಕ್ಕೆ ತದ್ವಿರುದ್ಧ ಗುಣ ಸ್ವಭಾವವನ್ನು ಊರ್ಮಿಳಾ ಹೊಂದಿದ್ದಾಳೆ. ಮೊದಲ ಪಾತ್ರವನ್ನು ಬಿಳಿ ಎಂದು ನೋಡಿದರೆ, ಇದು ಕಪ್ಪಾಗಿ ಕಾಣಿಸುತ್ತದೆ. ಎಲ್ಲರನ್ನೂ ಹೆದರಿಸುವ ವ್ಯಕ್ತಿತ್ವ ಈಕೆಯದು. ಇವಳ ಮುಂದೆ ಯಾರೂ ನಿಂತು ಮಾತನಾಡುವಂತಿಲ್ಲ. ಅಷ್ಟು ಗಟ್ಟಿತನ ಊರ್ಮಿಳಾಳಿಗೆ ಇದೆ. ಅದಕ್ಕೂ ಇದಕ್ಕೂ ತುಂಬ ವ್ಯತ್ಯಾಸ ಇದೆ. ಇಂತಹ ಭಿನ್ನತೆ ಇರಬೇಕು ಎಂದುಕೊಂಡಿದ್ದೆ. ‘ಅಮೃತಾ’ ನೋಡಿದ ಅನೇಕರು ‘ಊರ್ಮಿಳಾ’ ಪಾತ್ರವನ್ನು ಒಪ್ಪಿಕೊಂಡಿಲ್ಲ. ಅವರಿಗೆ ಅಮೃತಾದಂತಹ ಪಾತ್ರಗಳನ್ನೇ ಮಾಡಬೇಕು ಎನ್ನುವ ಆಸೆ ಇದೆ. ಕಲಾವಿದರಿಗೆ ಬೇರೆ ಬೇರೆ ಪಾತ್ರವನ್ನು ಮಾಡಬೇಕು ಎನ್ನುವ ಹುಚ್ಚು ಇರುತ್ತದೆ. ಅಂತಹ ಆಸೆಗಾಗಿ ಈ ಪಾತ್ರವನ್ನು ಆಯ್ಕೆ ಮಾಡಿಕೊಂಡಿರುವೆ.

◆ **ನೆಗೆಟಿವ್ ಅಂದರೆ ಹಿಂಸಾಚಾರದ ರೂಪ ಆಗಬೇಕೆ?**

ಕೆಲವರು ಪಾತ್ರವನ್ನು ಅರ್ಥಮಾಡಿಕೊಳ್ಳುತ್ತಾರೆ. ಇನ್ನೂ ಕೆಲವರು ‘ಯಾಕೆ ಮೇಡಂ ಮನೆಯವರಿಗೆಲ್ಲ ಅಷ್ಟು ಕಾಟ ಕೊಡುತ್ತೀರಿ’ ಎಂದು ತಮ್ಮ ಅಸಮಾಧಾನವನ್ನು ಹೊರಹಾಕುತ್ತಾರೆ. ‘ನೀ ಇರಲು ಜೊತೆಯಲ್ಲಿ’ಯ ಊರ್ಮಿಳೆ ನ್ಯಾಯವನ್ನು ಬಯಸುತ್ತಾಳೆ. ಆಸ್ತಿ ಹೊಡೆಯುವ ಇಲ್ಲವೇ ಮತ್ತಿನ್ನೇನೋ ಸ್ವಾರ್ಥವನ್ನು ಸಾಧಿಸುವ ಉದ್ದೇಶ ಈಕೆಗೆ ಇಲ್ಲ. ಅವಳ ಕ್ಯಾರೆಕ್ಟರ್‌ಅನ್ನು ಭಿನ್ನವಾಗಿ ತೆಗೆದುಕೊಂಡಿದ್ದಾರೆ. ನೆಗೆಟಿವ್ ಎಂದ ತಕ್ಷಣ ಆಸ್ತಿ ಎಂದು ಅನ್ನಿಸುತ್ತದೆ. ಬಾಲ್ಯದಲ್ಲಿ ಆಕೆಗೆ ಅನ್ಯಾಯ ಆಗಿರುತ್ತದೆ. ತನಗಾದ ತೊಂದರೆಗೆ ಸೇಡನ್ನು ತೀರಿಸುವ ಸಂಬಂಧ ಈ ಮನೆಯ ಸೊಸೆಯಾಗಿ ಬಂದಿದ್ದಾಳೆ. ಎಲ್ಲೂ ಏಕತಾನತೆ ಕಾಣಿಸುವುದಿಲ್ಲ. ಊರ್ಮಿಳಾ ಪ್ರತೀಕಾರವನ್ನು ತೆಗೆದುಕೊಳ್ಳಲು ಬಂದಿದ್ದಾಳೆಯೇ ಹೊರತು ಬೇರೆ ಇನ್ನೇನೂ ಇಲ್ಲ.

◆ **ರಿಯಾಲಿಟಿ ಶೋಗಳಲ್ಲಿ ಒಬ್ಬ ಹುಡುಗಿಗೆ ಎದುರಾಗುವ ಸವಾಲುಗಳು ಏನು?**

ರಿಯಾಲಿಟಿ ಶೋದಲ್ಲಿ ಹುಡುಗ–ಹುಡುಗಿ ಸಮಾನ ಸ್ಪರ್ಧಿಗಳು. ಅಲ್ಲಿ ಲಿಂಗದ ಭಿನ್ನತೆಯೇ ಇಲ್ಲ. ‘ಡಾನ್ಸಿಂಗ್ ಸ್ಟಾರ್ 2’ ಮತ್ತು ‘ಸೂಪರ್ ಕ್ವೀನ್’ ಎರಡು ರಿಯಾಲಿಟಿ ಶೋಗಳಲ್ಲಿ ಸ್ಪರ್ಧಿಸಿದ್ದೇನೆ. ಅಲ್ಲಿ ಹೆಣ್ಣು–ಗಂಡು ಬೇರೆ ಎನ್ನುವ ಅನುಭವ ನನಗೆ ಆಗಿಲ್ಲ.

ಡಾನ್ಸ್ ಕಾರ್ಯಕ್ರಮ ತುಂಬ ಒತ್ತಡ ಅನ್ನಿಸುತ್ತಿತ್ತು. ಅದು ಅನಿವಾರ್ಯ. ಹೊಸ ಹೊಸ ಡಾನ್ಸ್‌ಗಳಿಗೆ ತಾಲೀಮು ಮಾಡುವುದು ಅನಿವಾರ್ಯವಾಗಿತ್ತು. ಕೆಲವೊಮ್ಮೆ ರಾತ್ರಿ 2–3 ಗಂಟೆಯ ತನಕ ಪ್ರಾಕ್ಟೀಸ್ ಮಾಡಿ, ಮತ್ತೆ ಬೆಳಿಗ್ಗೆ 6ಕ್ಕೆ ಚಿತ್ರೀಕರಣಕ್ಕೆ ಹೋಗಿದ್ದೂ ಉಂಟು. ಇಂತಹ ಚಾಲೆಂಜ್‌ಗಳನ್ನು ಸಹಜವಾಗಿ ಎದುರಿಸಬೇಕಾಗುತ್ತದೆ. ಬಾಲ್ಯದಿಂದಲೂ ಡಾನ್ಸ್ ನನ್ನ ಪ್ಯಾಶನ್.

◆ **ನಿಮ್ಮ ಸಿನಿಮಾ ಪಯಣ ಹೇಗಿತ್ತು?**

ಸಿನಿಮಾ ಮಾಡಿದ್ದು ಕಡಿಮೆ. ‘ಅಮೃತವರ್ಷಿಣಿ’ಯ ಸಮಯದಲ್ಲಿ ಸಿನಿಮಾಗಳಿಗೆ ತುಂಬ ಅವಕಾಶ ಬಂದವು. ಕಾರ್ಯ ಒತ್ತಡದ ಕಾರಣಕ್ಕೆ ಪ್ರಯತ್ನ ಮಾಡಲು ಆಗಲಿಲ್ಲ. ‘ಅಂಬುಜ’ದಲ್ಲಿ ಮಾಡಿದೆ. ಬರಗೂರು ರಾಮಚಂದ್ರಪ್ಪ ಅವರ ‘ಸ್ವಪ್ನ ಮಂಟಪ’ದಲ್ಲಿ ಮಾಡಿದೆ. ತುಳು ಸೇರಿ ಕೆಲವು ಸಿನಿಮಾಗಳಲ್ಲಿ ಮಾಡಿದ್ದೇನೆ.

ಬರಗೂರು ಅವರ ಸಿನಿಮಾದಲ್ಲಿ ಎರಡನೇ ನಾಯಕಿ ಪಾತ್ರ. ಮಾನಸಿಕ ಸಮಸ್ಯೆ ಇರುವ ಹುಡುಗಿ. ಅದು ತುಂಬ ಸವಾಲನ್ನು ಒಡ್ಡಿತ್ತು. ನಾನೇ ಮಾಡಬೇಕು ಎನ್ನುವ ಕೋರಿಕೆ ತಂಡದಿಂದ ಬಂದಿತ್ತು. ಹಳೆಯ ಕಥೆಯ ಎಳೆಯನ್ನು ತೆಗೆದುಕೊಂಡಿದ್ದು ಸಿನಿಮಾ ಚೆನ್ನಾಗಿತ್ತು.

◆ **ನಟನೆಯ ಹಾದಿಯಲ್ಲಿ ಸ್ಮರಣೀಯ ಪಾತ್ರ ಯಾವುದು?**

ನಟಿಯಾಗಿ ಎಲ್ಲ ಪಾತ್ರಕ್ಕೂ ನ್ಯಾಯ ಕೊಡಲೇಬೇಕು. ಪಾತ್ರ ಯಾವುದೇ ಇದ್ದರೂ ಅದರಲ್ಲಿ ಸಂಪೂರ್ಣ ತೊಡಗಿರುತ್ತೇನೆ. ಇದೇ ಒಂದು ಇಷ್ಟ ಎಂದು ಆಯ್ಕೆ ಮಾಡಿಕೊಳ್ಳಲು ಕಷ್ಟ ಆಗುತ್ತದೆ. ನನಗೆ ಅನ್ನಿಸಿದಂತೆ, ಅಮೃತಾ ಪಾಸಿಟಿವ್ ಪಾತ್ರ. ಆ ಪಾತ್ರವನ್ನು ನಿರ್ವಹಿಸುವ ಸಂದರ್ಭದಲ್ಲಿ ನಟನೆ ಗೊತ್ತಿರಲಿಲ್ಲ. ಅಭಿನಯ ಕಲಿಯುತ್ತಾ ಕೆಲಸ ಮಾಡಿದೆ. ನಂತರ ‘ಹಿಟ್ಲರ್ ಕಲ್ಯಾಣ’ದಲ್ಲಿ ಅಂತರ ಎನ್ನುವ ನೆಗೆಟಿವ್ ಪಾತ್ರ ಮಾಡಿದೆ. ಮೊದಲು ಪಾಸಿಟಿವ್ ಇದ್ದ ಆ ಪಾತ್ರ ನೆಗೆಟಿವ್‌ಗೆ ತಿರುಗುತ್ತದೆ. ಅದಕ್ಕಿಂತ ಇದು ನೆಗೆಟಿವ್ ಇದೆ. ಮುಂದೆ ಪಾಸಿಟಿವ್ ಪಾತ್ರವನ್ನೇ ಮಾಡಬೇಕು ಎಂದುಕೊಂಡಿದ್ದೇನೆ. ■

